**MVC 2847/2016**
**C/w 2848, 2850 and 2852/2026**
**PW-1.**

..10..

**ದಿನಾಂಕಃ 16.02.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ–** 2ನೇ ಎದುರುದಾರ ಪರ ಶ್ರೀ M.Y.S. ವಕೀಲರಿಂದಃ–

1) ನಾನು 8 ದಿನಗಳ ಕಾಲ ಒಳರೋಗಿಯಾಗಿ ದಾಖಲಾಗಿದ್ದೆ. ನಾನು ಸಂಪೂರ್ಣ ಗುಣಮುಖವಾದ ನಂತರ ಬಿಡುಗಡೆ ಮಾಡಿದರು ಎಂದರೆ ಸರಿ. ನಿಪ್ಪಾಣಿಯಲ್ಲಿ ನನಗೆ ಶಸ್ತ್ರಚಿಕಿತ್ಸೆಯಾಗಿಲ್ಲ, ಪುಣೆಯಲ್ಲಿ ಆಗಿದೆ. ನಿಪ್ಪಾಣಿಯಲ್ಲಿ ಚಿಕಿತ್ಸೆ ಪಡೆದ ಬಗ್ಗೆ ದಾಖಲೆಗಳನ್ನು ನೀಡಿದ್ದೇನೆ. ನಾನು ಮೊದಲಿನಂತೆ ಈಗಲೂ ಕೆಲಸ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನನಗಾದ ಗಾಯಗಳು ಸಾದಾಸ್ವರೂಪದ್ದವು ಎಂದರೆ ಸರಿಯಲ್ಲ. ಅಪಘಾತ ಪೂರ್ವದಲ್ಲಿ ನಾನು ಕೆಲಸ ಮಾಡಿ ತಿಂಗಳಿಗೆ 25,000/– ರೂ. ಆದಾಯ ಗಳಿಸುತ್ತಿದ್ದ ಬಗ್ಗೆ ದಾಖಲೆ ನೀಡಿಲ್ಲ ಎಂದರೆ ಸರಿ. ಆ ರೀತಿ ನನಗೆ ಯಾವುದೇ ಆದಾಯ ಇಲ್ಲದ ಕಾರಣ ದಾಖಲೆ ನೀಡಿಲ್ಲ ಎಂದರೆ ಸರಿಯಲ್ಲ. ಅಪಘಾತ 10–12 ವರ್ಷಗಳ ನಂತರ ಬಿಡುಗಡೆ ದಾಖಲೆಗಳನ್ನು ಪಡೆದು ಹಾಜರು ಪಡಿಸಿದ್ದೇನೆ. ಅಪಘಾತ ಸ್ಥಳದ ಬಳಿ ಊಟ ಮಾಡಲು ಕುಳಿತಿದ್ದೇವು. ನನಗೆ ಆ ಸ್ಥಳದಲ್ಲಿ ಕೂಡಲು ಅನುಮತಿ ಇರಲಿಲ್ಲ ಎಂದರೆ ಸರಿಯಲ್ಲ. ನಮ್ಮ ತಪ್ಪಿನಿಂದ ನಾವು ಕೂಡಬಾರದ ಜಾಗದಲ್ಲಿ ಕುಳಿತಿದ್ದರಿಂದ ನಮ್ಮ ನಿರ್ಲ್ಯಕ್ಷ್ಯತನದಿಂದ ಅಪಘಾತ ಸಂಭವಿಸಿದ್ದು, ನಾನು ಯಾವುದೇ ಪರಿಹಾರ ಕೇಳಲು ಹಕ್ಕುಳ್ಳವನಿಲ್ಲ ಹಾಗೂ 2ನೇ ಎದುರುಗಾರರು ಯಾವುದೇ ಪರಿಹಾರ ನೀಡಲು ಬಾದ್ಯಸ್ಥರಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ–** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು.)

(ಸಾಕ್ಷಿಗೆ ಓ ಹೆ ಕೆ ಸರಿ ಅದೆ)

ಬೆಳಗಾವಿಯ 7 ನೇ ಹೆಚ್ಚುವರಿ ಜಿಲ್ಲಾ ಮತ್ತು
ಸತ್ರ ನ್ಯಾಯಾಧೀಶರು ಹಾಗೂ ಸದಸ್ಯರು
ವಾಹನ ಅಪಘಾತ ಹಕ್ಕು ನ್ಯಾಯಾಧೀಕರಣ
ಚಿಕ್ಕೋಡಿ.